ದಿನಾಂಕ : 22.02.2021 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪ**ರವಾಗಿ ಶ್ರೀ** ಎಸ್.ಆರ್ **ವಕೀಲರಿಂದ,**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಸ್ವಂತ ಊರು ಯರಂಗಳ್ಳಿ. ನಾನು ವ್ಯವಸಾಯ ಮಾಡುತ್ತೇನೆ. ಬೆಳ್ಳಿಗೆ 6 ಗಂಟೆಗೆ ಹೊಲಕ್ಕೆ ಹೋಗಿ ಮಧ್ಯಾಹ್ನ 12 ಗೆಂಟೆ ಬರುತ್ತೇನೆ. ನನ್ನ ಸ್ವಂತ ಜಮೀನು ಇಲ್ಲ ನಾನು ಗುತ್ತಿಗೆ ಮಾಡುತ್ತೇನೆ. 12 ಗಂಟೆಯ ನಂತರ ಮತ್ತೆ ಹೊಲಕ್ಕೆ ಹೋಗುವುದು ಬರುವುದು ಮಾಡುತ್ತೇನೆ. 2014 ರಿಂದ ನಾನು ವಾದಿಯ ಜಮೀನನ್ನು ಗುತ್ತಿಗೆ ಮೇಲೆ ಸಾಗುವಳಿ ಮಾಡುತ್ತೇನೆ. ಪ್ರತಿವಾದಿಯ ಗಂಡನ ಪರಿಚಯ ಇದೆ. ಪ್ರತಿವಾದಿಯನ್ನು ಪರಿಚಯ ಇದೆ. ವಾದಿಯೂ ನನ್ನ ಕುಲಸ್ಥರು. ನನ್ನ ಚಿಕ್ಕಪ್ಪನಾಗಬೇಕು. ವಾದಿಯ ಸ್ವಂತ ಊರು ಸಿದ್ದಮ್ಮನಹಳ್ಳಿ. ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿರುತ್ತಾರೆ ಎಂದು ಗೊತ್ತಿಲ್ಲ. ನೋಟ್ ಗೆ ಸಹಿ ಮಾಡಿದ್ದೇನು ಎಂದು ನಾನು ಸಾಕ್ಷಿ ಹೇಳುತ್ತಿದ್ದೇನೆ. (ಇವಾಗ ಸಾಕ್ಷಿಗೆ ಪ್ರಾಂಸರಿ ನೋಟ್ ಬರೆದ ದಿನಾಂಕ ಕೇಳಿದಾಗ ಸಾಕ್ಷಿಯೂ ಕೈಯಲ್ಲಿ ದಿನಾಂಕ ಬರೆದುಕೊಂಡಿರುವುದು ನ್ಯಾಯಾಲಯದ ಗಮನಕ್ಕೆ ಬಂದಿರುತ್ತದೆ.) ಪ್ರಾಂಸರಿ ನೋಟ್ ನ್ನು ಪ್ರಾಣೇಶಿ ಅವರ ಮನೆಯಲ್ಲಿ ಬರೆದಿರುತ್ತಾರೆ. ಪ್ರಾಣೇಶಿ ಅದನ್ನು ಟೈಪ್ ಮಾಡಿರುತ್ತಾರೆ. ಆ ದಿನ ಪ್ರಾಣೇಶಿ ರವರ ಮನೆಯಲ್ಲಿ ನಾನು, ಶಿವಪ್ರಸಾದ, ಮಲ್ಲಯ್ಯ, ವಾದಿ ಮತ್ತು ಪ್ರತಿವಾದಿ ಇದ್ದರು. ಅವರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಸಾಕ್ಷಿ ಯಾಗಿ ಬರಬೇಕು ಎಂದು ನನ್ನನ್ನು ವಾದಿ ಕರೆದಿದ್ದರು. ನಾನು ಕೆಲಸದ ಮೇರೆಗೆ ವಾದಿಯ ಮನೆಗೆ ಹೋಗಿದ್ದೇನು. ನಂತ ರ ನಾನು ಪ್ರಾಣೇಶಿಯ ಮನೆಗೆ ಹೊಗಿ ಸಾಕ್ಷಿ ಸಹಿ ಮಾಡಿರುತ್ತೇನೆ. ನನ್ನನ್ನು ಕರೆದಾಗಿ ಸಾಯಂಕಾಲ 4:00 ಗಂಟೆಯಾಗಿತ್ತು. ನಾನು ಸಹಿ ಮಾಡುವಾಗ ಅಂದಾಜು 4:00 ರಿಂದ 4:30 ಗಂಟೆಯಾಗಿತ್ತು. ಪ್ರಾಣೇಶಿ ನನ್ನ ಸಂಬಂಧಿಕರಲ್ಲ. ಪ್ರಾಣೇಶಿ ಪ್ರಾಂಸರಿ ನೋಟ್ ಬರೆಯುವ ಕೆಲಸ ಮಾಡುತ್ತಾರೆ. ಇನ್ನೂಬ್ಬ ಸಾಕ್ಷಿದಾರರ ಮಲ್ಲಯ್ಯ ಅಲ್ಲೆ ಇದ್ದರು. ಅವರನ್ನು ಸಹ ವಾದಿಯೇ ಕರೆದುಕೊಂಡು ಬಂದಿರುತ್ತಾರೆ. ಆ ದಿನ ವಾದಿಯೂ 5,15,000/- ರೂ.ಗಳು ಕೊಟ್ಟಿರುತ್ತಾರೆ. ಅದು 500/- ರೂಪಾಯಿಯ ನೋಟ್ ಗಳು ಇದ್ದವು. 10 ಕಟ್ಟು ಮತ್ತು 30 ನೋಟ್‌ಗಳನ್ನು ಕೊಟ್ಟಿರುತ್ತಾರೆ. ವಾದಿಯೂ ಮನೆಯಲ್ಲಿದ್ದ ಹಣವನ್ನು ತಂದಿರುತ್ತಾರೆ. ಪ್ರಾಂಸರಿ ನೋಟ್ ನ್ನು ಕನ್ನಡದಲ್ಲಿ ಟೈಪ್

ಮಾಡಿರುತ್ತಾರೊ ಅಥವಾ ಆಂಗ್ಲ ಭಾಷಯಲ್ಲಿ ಟೈಪ್ ಮಾಡಿರುತ್ತಾರೊ ನನಗೆ ಗೊತ್ತಿಲ್ಲ. ಪ್ರಾಂಸರಿ ನೋಟ್ ಸಣ್ಣದಿತ್ತು. ಪ್ರತಿವಾದಿಯೂ ಸಹಿ ಮಾಡಿದ ನಂತರ ನಾನು ಪ್ರಾಂಸರಿ ನೋಟ್‌ಗೆ ಸಹಿ ಮಾಡಿದ್ದೇನೆ. ಯಾರ್ಯಾರು ಸಹಿ ಮಾಡಿರುತ್ತಾರೊ ಎಂದು ತಿಳಿದು ಸಹಿ ಮಾಡಿದ್ದೀರೊ ಅಥವಾ ಸುಮ್ಮನೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯೂ ನಾನು ಸುಮ್ಮನೆ ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿಗೆ 40 ಎಕರೆ ನೀರಾವರಿ ಜಮೀನು ಇದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗೆ 25 ಎಕರೆ ನೀರಾವರಿ ಜಮೀನು ಇದೆ. ಒಂದು ಎಕರೆಗೆ ಎಲ್ಲಾ ಖರ್ಚು ತೆಗೆದು ಒಂದು ಲಕ್ಷ ರೂ. ಉಳಿಯುತ್ತದೆ ಎಂದರೆ ಸರಿಯಲ್ಲ. ಈ ವರ್ಷ 25 ಸಾವಿರ ರೂ. ಉಳಿಯಬಹುದು. ರೈತರಿಗೆ ಕೆಲವೊಂದು ಸಲ ಎಲ್ಲಾ ನಷ್ಟವಾಗುತ್ತದೆ. ನಾನು 16 ಎಕರೆ ದುಡಿಮೆ ಮಾಡುತ್ತೇನೆ.

ವಾದಿಯೂ ಪ್ರಾಣೇಶಿ ರವರ ಮನೆಯಲ್ಲಿ ದಿನಾಂಕ 24.04.2016 ರಂದು ಪ್ರತಿವಾದಿಗೆ 5,15,000/- ರೂಗನಳ್ಳು ನೀಡಿ ನನ್ನ ಸಮಕ್ಷಮ ಪ್ರತಿವಾದಿಯೂ ಪ್ರಾಸಂರಿ ನೋಟ್ ನ್ನು ಬರೆದುಕೊಟ್ಟು ಅದಕ್ಕೆ ನಾನು ಸಾಕ್ಷಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 25 ಎಕರೆ ಜಮೀನು ಇರುವವರಿಗೆ 5 ಲಕ್ಷ ರೂ. ಸಾಲ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿಯೂ ಲಾಸ ಆದರೆ ಅವಶಕತೆ ಇದೆ, ಬೆಳೆ ಚೆನ್ನಾಗಿ ಆದರೆ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ನಾನು ವಾದಿಯ ಜಮೀನನ್ನು ಗುತ್ತಿಗೆಗೆ ಸಾಗುವಳಿ ಮಾಡುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2** ನೇ ಹೆ ಪಿ ಸಿವಿಲ್ ಜಡ್ಜ್, ಬಳ್ಳಾರಿ